


ಮನ್ಯಾನ ಹೈನದ ವ್ಯಾಪಾರ ಅತ್ತೀನ ನೋಡಕೊಳ್ಳತಿದ್ದಳು. ಸೊಸೆಯ ಅಸಮಾಧಾನ ಸಾವಂತ್ರಿಗೆ ಗೊತ್ತಿದ್ರು, ಒಂದು ದಿನನೂ ಜಗಳ ಮಾಡತಿರಲಿಲ್ಲ. ವಯಸ್ಸಿನಲ್ಲಿ ಸಣ್ಣವಳಾದ ಆಕಿಗ ಈಗ ಬುದ್ಧಿ ಕಮ್ಮಿ, ಬಾಳೆ ಮಾಡತಾ ಮಾಡತಾ ಎಲ್ಲಾ ಕಲಕೊತಾಳ ಅಂತಾ ತಿಳಿಸಿ ಹೇಳತಿದ್ಲು. ತನ್ನ ಮಗಳು ಶಾರವ್ವ ಮದುವೆಯಾಗಿ ಹೋದ ಮ್ಯಾಲಿಂದ ಸೊಸಿನ ಮಗಳು ಅಂತಾ ತಿಳಕೊಂಡು ನಡಕೊತಿದ್ಲು. ಅತ್ತಿ, ಮಾವ, ಗಂಡನ ನಿಸ್ವಾರ್ಥ ಪ್ರೀತಿ ತನಗ ಸಿಕ್ಕಿದ್ರು ತವರುಮನೆಯವರ ಮಾತು ಕೇಳಿ ಕಮಲವ್ವ ಸುಮಕ ಕಿರಿಕಿರಿ ಮಾಡತಿದ್ಲು. ಸಾವಂತ್ರಿ ಮಾತ್ರ ಇದ್ಯಾವುದನ್ನು ಗಮನಕ ತೊಗೊಳ್ಳಾರದ ತನ್ನ ಧರಮದ ಸರಿ ತಾನು ಹಿರಿತನ ಮಾಡತಿದ್ಲು. ಹಾಲು, ಮೊಸರು, ಬೆಣ್ಣಿ, ತುಪ್ಪ ಮಾರಿ ಬಂದ ರೊಕ್ಕದಿಂದ ಮೊಮ್ಮಕ್ಕಳಿಗೆ ಬೆಳ್ಳಿ ಸಾಮಾನು, ಹೊಸ ಅರಿವಿ ಮತ್ತು ಸೊಸಿಗ ಚೊಲೊ ಸೀರಿ ಕೊಡಸತಿದ್ಲು. ಕಮಲವ್ವನ ತವರುಮನಿಯವರು ಅಂಥಾ ಇದ್ದುಳ್ಳವರು ಆಗಿರದ ಕಾರಣಕ್ಕ ನಾಕ ಮಂದ್ಯಾಗ ಮಾನಮರ್ಯಾದೆ ಕಾಪಾಡಕೊಬೇಕು ಅಂತಾ ಎಲ್ಲಾ ಪೋಲಮಿ ಮಾಡಿಕೊತ ಬೀಗರ ಮಾನಾನಾ ಕಾಪಾಡತಿದ್ಲು. ಇಷ್ಟೆಲ್ಲಾ ಮಾಡಿದ್ರೂ ಕಮಲವ್ವಗ ಸಮಾಧಾನ ಇರಲಿಲ್ಲ.

'ಮುಮ್ಮಿಗಟ್ಟಿ ಬೀಗರು ಬಂದ ನಂತರ ಹೆಣಾ ಎತ್ತತಾರ' ಅಂತಾ ಅನಕೋತ ಓಣಿ ಹೆಂಗಸರು ಮನ್ಯಾನ ದಗದಾ ಅಲ್ಲೇ ಬಿಟ್ಟು ಬಂದದ್ದು ನೆನಪಾಗಿ ಚಡಪಡಸ್ತಾ ಇದ್ರು. ಸಾವಂತ್ರಿಯ ಒಬ್ಬಳೇ ಮಗಳು ಶಾರವ್ವನನ್ನು ದೂರದ ಸಂಬಂಧಿಕರಿಗೆ ಮದುವೆಮಾಡಿ ಕೊಟ್ಟಿದ್ರು. ಆಕಿ ಬರೊ ತನಕಾ ಹೆಣಾ ಎತ್ತಬಾರದು ಅಂತಾ